ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.274/2020

| | | | |
|---|---|---|---|
| ಹೆಸರು | : | ಸಿ ರಾಮಕೃಷ್ಣಯ್ಯ | ಸಿ .ಡಬ್ಲ್ಯೂ: 33 |
| ತಂದೆ ಹೆಸರು | : | ಲೇಟ್ ಚಿಕ್ಕಣ್ಣ | ಪಿ .ಡಬ್ಲ್ಯೂ:5 |
| ವಯಸ್ಸು | : | 63 ವರ್ಷ | |
| ಉದ್ಯೋಗ | : | ನಿವೃತ್ತ PI | |
| ವಾಸಸ್ಥಳ | : | ಬೆಂಗಳೂರು | |

ಸಾಕ್ಷಿಯನ್ನು ದಿಃ18-08-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಕಲಂ **299** ಸಿ ಆರ್ ಪಿ ಸಿ ರಡಿಯಲ್ಲಿ ಸಾಕ್ಷಿಯು ಮುಖ್ಯ ವಿಚಾರಣೆ **ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿಃ 01-03-2020 ರಿಂದ 01-06-2021 ರವರೆಗೆ ಗುಬ್ಬಿ ಪಟ್ಟಣದ ವೃತ್ತ ನಿರೀಕ್ಷಕನಾಗಿ ಸೇವೆ ಸಲ್ಲಿಸಿದ್ದೇನೆ .

ದಿಃ02-03-2020 ರಂದು ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 32 ರಿಂದ ಸ್ವೀಕರಿಸಿ ತನಿಖೆ ಮುಂದುವರೆಸಿರುತ್ತೇನೆ .

ದಿಃ 13-03-2020 ರಂದು ಗಾಯಾಳುಗಳಾದ ಚಾಸಾ -3 ರಿಂದ 5 ರವರ ಗಾಯದ ಪ್ರಮಾಣವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೆನೆ ಹಾಗೂ ಅವರುಗಳ ಹೇಳಿಕೆ ಪಡೆದಿರುತ್ತೇನೆ .

ದಿಃ 15-03-2020 ರಂದು ಚಾಸಾ -26 ರವರು ಠಾಣೆಗೆ ಹಾಜರಾಗಿ ಬಸ್ಸಿನಲ್ಲಿದ್ದ ನಾಲ್ಕು Box ಗಳಲ್ಲಿ ವಿವಿಧ ಕಂಪನಿಯ 49 ಮೊಬೈಲ್ ಗಳು ಬೆಂಕಿಯಲ್ಲಿ ಸುಟ್ಟು ಹೋಗಿರುತ್ತವೆ ಎಂದು ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದ್ದು ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ .

ಅದೇ ದಿನ ಮೃತ ಗೌರಮ್ಮ ರವರ ಪಿ ಎಂ ವರದಿ ಪಡೆದಿದ್ದೇನೆ . ಪ್ರಕರಣ ತನಿಖೆ ಮುಕ್ತಾಯಗೊಂಡಿದ್ದ ಕಾರಣ ಆರೋಪಿತರ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ .

ನಿಪಿ - 3,5 ಮತ್ತು 7 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -3 (ಎ) , 5 (ಎ) ಮತ್ತು 7 (ಎ ) ಎಂದು ಗುರುತಿಸಲಾಯಿತು.

<u>ಸಿ.ಸಿ.ನಂ.274/2020</u>

ಚಾಸಾ -26 ರವರು ಹಾಜರುಪಡಿಸಿದ stock transfer ದಾಖಲೆಯೆಂದು ಸಾಕ್ಷಿಯು ನಾಲ್ಕು ಪುಟಗಳ ದಾಖಲೆ ಮತ್ತು ಪ್ರತಿ ಪುಟದಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-9 ಮತ್ತು ಎಲ್ಲಾ ಪುಟಗಳಲ್ಲಿ ಕಂಡುಬರುವ ಸಹಿಯನ್ನು ನಿಪಿ -9 (ಎ) ಎಂದು ಗುರುತಿಸಲಾಯಿತು . ಮೃತ ಗೌರಮ್ಮ ರವರ ಪಿ ಎಂ ವರದಿಯನ್ನು ಗುರುತಿಸಿದ್ದು ಅದನ್ನು ನಿಪಿ -10 ಅದರಲ್ಲಿ ತಮ್ಮ ಸಹಿಯನ್ನು ನಿಪಿ -10 (ಎ) ಎಂದು ಗುರುತಿಸಲಾಗಿದೆ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
**(ಅನುಪಮ.ಡಿ )**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ